



ಕೃತಿಕಾ ಶ್ರೀನಿವಾಸನ್



ದೀಪಿಕಾ ಶ್ರೀನಿವಾಸನ್

ಕವಿಗಳು ಬಳಸಿರುವ ಶಬ್ದ–ಅರ್ಥಗಳನ್ನು, ಜೊತೆಗೆ ಸಂಗೀತದ ಮೂಲಕ ಆ ಕಾವ್ಯದಲ್ಲಿನ ಚಮತ್ಕಾರವನ್ನು ಪರಿಚಯಿಸುವುದು ನಮ್ಮ ಉದ್ದೇಶ. ಸಂಗೀತಕ್ಕೆ ಈ ಅಲಂಕಾರಗಳು ಕಳೆ ತರಬಲ್ಲವು. ಈ ಸರಣಿಯಲ್ಲಿ ಹತ್ತು ಅಲಂಕಾರಗಳನ್ನು ಬಳಸಲಾಗಿದೆ' ಎಂದು ವಿಡಿಯೊದಲ್ಲಿ ವಿವರಣೆ ನೀಡಿದ್ದಾರೆ ಸಿ.ಎನ್. ರಾಮಚಂದ್ರನ್. ಈಚೆಗಷ್ಟೇ ಎರಡನೇ ಸರಣಿಯ ಐದು ಕಂತುಗಳು ಪ್ರಸಾರವಾಗಿವೆ.

## ಕೃತಿಕಾ ಗಾನಸುಧೆ; ದೀಪಿಕಾ ವಾದನ

'ಸಾಹಿತ್ಯ, ಸಂಗೀತವನ್ನು ಬೇರೆ ಬೇರೆಯಾಗಿ ನೋಡುವುದು ಸಾಧ್ಯವೇ ಇಲ್ಲ. ಕಾಮನಬಿಲ್ಲಿಗೆ ಹಲವಾರು ಬಣ್ಣಗಳಿರುವಂತೆ ಕಾವ್ಯಕ್ಕೆ ಹಲವಾರು ಆಯಾಮಗಳು. ಅದನ್ನು ಅರ್ಥ ಮಾಡಿಕೊಂಡು ಸಂಗೀತದ ಮೂಲಕ ಪ್ರಸ್ತುತಪಡಿಸುವುದು ಒಂದು ಕಲೆ. ಈ ಕಾಲದ ಸಂಗೀತಗಾರರು ಕಛೇರಿಗಳಲ್ಲಿ ಹೇಗೆ ಸಾಹಿತ್ಯವನ್ನು ಬಳಸಿಕೊಳ್ಳಬಹುದು ಎಂಬುದರ ಪ್ರಯತ್ನವಾಗಿ ಈ ಆಲೋಚನೆ ರೂಪುಗೊಂಡಿತು. ಶಾಸ್ತ್ರೀಯ ಸಂಗೀತದ ಘನತೆಗೆ, ಸಾಹಿತ್ಯದ ಶ್ರೀಮಂತಿಕೆಗೆ ಒಂದಿಷ್ಟೂ ಚ್ಯುತಿ ಬಾರದಂತೆ, ಕಾವ್ಯ ಪ್ರಸ್ತುತಿಯಲ್ಲಿ ಆಭಾಸವಾಗದಂತೆ ಜತನದಿಂದ ಕಾಯ್ದುಕೊಳ್ಳಬೇಕಾದ ಸವಾಲು ನಮ್ಮದಾಗಿತ್ತು' ಎಂದು ತಮ್ಮ ಯೋಜನೆ ಮೊಳಕೆಯೊಡೆದ ಕುರಿತು ವಿವರಣೆ ನೀಡುತ್ತಾರೆ ವಿದುಷಿ ಕೃತಿಕಾ ಶ್ರೀನಿವಾಸನ್.

'ಮೊದಮೊದಲು ಕನ್ನಡ ಕಾವ್ಯವನ್ನು ಪ್ರಾರ್ಥನೆಯಾಗಿ ಕೆಲವು ಕಡೆ ಹಾಡುತ್ತಿದ್ದೆ. ಅದನ್ನು ಕೇಳಿದ್ದ ಸಾಹಿತಿ ಕೆ.ಎಸ್. ನಿಸಾರ್ ಅಹಮದ್ ಅವರು ತುಂಬಾ ಇಷ್ಟಪಟ್ಟಿದ್ದರು. ಕನ್ನಡ ಕಾವ್ಯವನ್ನು ಹೀಗೆ ಮೆಚ್ಚುವವರು ಇರುತ್ತಾರೆ ಎಂಬುದೇ ಹೊಸತನಕ್ಕೆ ಅಡಿಯಿಡಲು ನಮ್ಮನ್ನು ಪ್ರೇರೇಪಿಸಿತು. ಯೂಟ್ಯೂಬ್‌ನಲ್ಲಿ ಪ್ರಸಾರವಾದ ಮೊದಲನೇ ಸರಣಿಗೆ ಒಳ್ಳೆಯ ಪ್ರತಿಕ್ರಿಯೆ ಬಂತು. ಆಕಾಶವಾಣಿಯಲ್ಲಿ ಕೂಡ ಪ್ರಸಾರವಾಯಿತು. 'ನಮ್ಮ ರೇಡಿಯೋ'ದಲ್ಲಿ ಕಾರ್ಯಕ್ರಮ ಪ್ರಸಾರಗೊಂಡಿದ್ದು ಇನ್ನಷ್ಟು ಬಲ ತುಂಬಿತು. ಈ ಬೆಂಬಲವೇ ನಮಗೆ ಪ್ರೇರಣೆ. ಪ್ರತಿ ಕಾವ್ಯವನ್ನೂ ಹೊಸ ಹೊಸ ಶೈಲಿಯಲ್ಲಿ ಪ್ರಸ್ತುತಪಡಿಸುವ ಗುರಿಯಿದೆ. ಕಾವ್ಯದ ಭಾವಕ್ಕೆ ತಕ್ಕಂತೆ ನವೀನ ರೀತಿಯಲ್ಲಿ ಸಂಗೀತ ಸಂಯೋಜಿಸುವುದು ನಮ್ಮ ಮುಂದಿನ ಹೆಜ್ಜೆ' ಎಂದು ಸಂತಸ ಹಂಚಿಕೊಳ್ಳುತ್ತಾರೆ ಕೃತಿಕಾ.

'ಈ ಸಂಗೀತ ಪ್ರಯೋಗ ಒಂದು ಹೊಸ ಪ್ರಯತ್ನವಷ್ಟೆ. ಇದು ಯಾವ ರೀತಿಯಲ್ಲಿಯೂ ಮಾರ್ಗಸೂಚಿಯಲ್ಲ. ಈಗಿನ ಕಲಾವಿದರು ಕಾವ್ಯ ಪ್ರಸ್ತುತಿಯನ್ನು ಕೈಗೆತ್ತಿಕೊಳ್ಳಬೇಕು ಎಂಬುದು ನಮ್ಮ ಯೋಜನೆ ಹಿಂದಿನ ಒಂದು ಉದ್ದೇಶ' ಎನ್ನುತ್ತಾರೆ ದೀಪಿಕಾ ಶ್ರೀನಿವಾಸನ್.

ಸಾಹಿತಿ ಡಾ. ಸಿ.ಎನ್. ರಾಮಚಂದ್ರನ್ ಅವರ ಪರಿಕಲ್ಪನೆಯ ಯೋಜನೆ ಇದಾಗಿದ್ದು, ರಾಗ ಸಂಯೋಜನೆ ಹಾಗೂ ಗಾಯನ ಕೃತಿಕಾ ಶ್ರೀನಿವಾಸನ್ ಅವರದ್ದು. ವಾದ್ಯ ನಿರ್ವಹಣೆ, ಮೃದಂಗ ಹಾಗೂ ಕೊನ್ನಕ್ಕೋಲ್, ದೀಪಿಕಾ ಶ್ರೀನಿವಾಸನ್ ಅವರ ಜವಾಬ್ದಾರಿ.

ಮೊದಲ ಸರಣಿಯಲ್ಲಿ ವಿದ್ವಾನ್ ದೀಪಕ್ ಹೆಬ್ಬಾರ್ ಕೊಳಲು ವಾದನವಿತ್ತು. ಎರಡನೇ ಭಾಗದಲ್ಲಿ ಇನ್ನಷ್ಟು ವಾದ್ಯಗಳು ಜೊತೆಯಾದವು. ಅದಿತಿ ಕೃಷ್ಣಪ್ರಕಾಶ್‌ರ ವಯಲಿನ್, ತೇಜಸ್ವಿ ರಘುನಾಥ್‌ರ ಕೊಳಲು, ರಕ್ಷಿತಾ ರಮೇಶ್‌ರ ವೀಣೆ, ಕೃತಿಕಾ ಭಟ್‌ರ ತಬಲಾ, ಪ್ರಣವ್ ದತ್‌ರ ರಿದಂ ಪ್ಯಾಡ್ ಸಂಗೀತ ಕಾಮನಬಿಲ್ಲಿನ ಚೆಲುವು ಹೆಚ್ಚಿಸಿವೆ.

ಈ ಯೋಜನೆಯಲ್ಲಿನ ಸಂಗೀತಕ್ಕೆ ಕಾವ್ಯಗಳ ಆಯ್ಕೆ ರಾಮಚಂದ್ರನ್ ಅವರದ್ದಾದರೆ, ಆ ಪದ್ಯದ ಅರ್ಥ ತಿಳಿದುಕೊಂಡು, ಆ ಕಾವ್ಯದ ಭಾವಕ್ಕೆ ಯಾವ ಪ್ರಕಾರದ ಸಂಗೀತ, ರಾಗ ಸಂಯೋಜನೆ ಅಗತ್ಯ ಎಂಬುದನ್ನು ನಿರ್ಧರಿಸುವುದು ಕೃತಿಕಾ ಶ್ರೀನಿವಾಸನ್. ಪ್ರಕಾರಕ್ಕೆ ತಕ್ಕಂತೆ ವಾದ್ಯಗಳ ಸಂಯೋಜನೆ ದೀಪಿಕಾ ಶ್ರೀನಿವಾಸನ್ ಅವರದ್ದು.

ಈ ಯೋಜನೆಯನ್ನು ಆದಷ್ಟು ಚಿಕ್ಕದಾಗಿ, ಚೊಕ್ಕದಾಗಿ ನಿರೂಪಿಸುವ ಗುರಿ ಕೃತಿಕಾ ಅವರದ್ದು. ಇದೇ ಕಾರಣವಾಗಿ ಮೂರು ಸರಣಿಗಳಿಗೆ ಸೀಮಿತಗೊಳಿಸಿ, ಒಂದು ಕಂತಿಗೆ ಹತ್ತು ನಿಮಿಷಗಳ ಸಮಯ ಮೀಸಲಿಟ್ಟಿದ್ದಾರೆ. ಸದ್ಯ 'ಕನ್ನಡ ಕಾವ್ಯದಲ್ಲಿ ಶಿಲ್ಪ ಹಾಗೂ ಬಂಧ' ಮೂರನೇ ಸರಣಿ ಬಾಕಿದ್ದು, ಈ ಮೂರೂ ಸರಣಿಗಳನ್ನು ದಾಖಲಿಸುವ ಹಂಬಲ ಇವರದ್ದು.

ಕೊಂಡಿ: https://bit.ly/3DDIlXk